ಅವತ್ತು ಭಾನುವಾರ ಮತ್ತು ಸೋಮವಾರದ ಮಧ್ಯೆ ಬರುವ ನಿರಾಶಾದಾಯಕ ರಾತ್ರಿಯ ಮಧ್ಯಭಾಗದಲ್ಲಿ ಅಪರೂಪಕ್ಕೊಮ್ಮೆಯೆಂಬಂತೆ ಉಚ್ಚೆಗೆ ಎದ್ದು ಹೋದಾಗಲಿಂದಲೇ ಸಮಸ್ಯೆ ಶುರು ಆಗಿದ್ದು. ಭಾನುವಾರದ ರಾತ್ರಿಯ ಭಟ್ಟರ ಸಾಂಬಾರು ನೋಡಿ ಮುಖ ಕಿವುಚಿಕೊಂಡು ಎಐಟಿ ಸರ್ಕಲ್ಲಿಗೆ ಹೋಗಿ ಎರಡೆರಡು ಮಸಾಲೆ ದೋಸೆ ತಿಂದದ್ದಕ್ಕೇ ಅಲ್ಲವೇ ಬಾಯಾರಿಕೆ ಹೆಚ್ಚಾಗಿ, ಮಲಗುವ ಮುನ್ನ ಕೊಳಗಗಟ್ಟಲೆ ನೀರು ಕುಡಿದಿದ್ದು? ಭಟ್ಟರು ಸಂಬಳ ಹೆಚ್ಚಿಸದೇ ಎರಡು ವರ್ಷವಾಯಿತೆಂದು ಗೋಗರೆದಾಗ ಸೀನಿಯರುಗಳು ಭಟ್ಟರಿಗೆ ಹುಡುಗರ ಸಂಖ್ಯೆ ಕಡಿಮೆಯಾಗಿದೆ, ಶ್ರಮವೂ ಕಡಿಮೆಯಾಗಿರುತ್ತದೆ, ಇದೇ ಸಂಬಳಕ್ಕೆ ಮಾಡುವುದಾದರೆ ಮಾಡಿ ಎಂದು ಕಟುವಾಗಿ ಹೇಳಿದ್ದಕ್ಕೇ ಅಲ್ಲವೇ ಭಟ್ಟರು ಸಿಟ್ಟುಗೊಂಡು ಇತ್ತೀಚೆಗೆ ಅಡುಗೆಯನ್ನು ಕೆಟ್ಟದಾಗಿ ಮಾಡುತ್ತಿರುವುದು? ಇವಾವುದೂ ಅಲ್ಲ, ನಾನು ಮೊದಲನೆಯದಾಗಿ ಈ ಹಾಸ್ಟೆಲ್ಲಿಗೆ ಸೇರಲೇಬಾರದಿತ್ತು, ನಾನು ಮತ್ತು ಭರತ ಒನ್ ಬಿಎಚ್‌ಕೆ ಮನೆ ಮಾಡಿಕೊಂಡು ಇರೋಣ ಎಂದಲ್ಲವೇ ಹೋದ ವರ್ಷ ಸೆಪ್ಟೆಂಬರಿನಲ್ಲಿ ಊರಿಂದ ಬಸ್ ಹತ್ತುವ ಮುನ್ನ ತೀರ್ಮಾನವಾಗಿದ್ದು? ಮನೆ ಹುಡುಕುವ ಸಮಯದಲ್ಲಿ ಈ 'ಬ್ರಾಹ್ಮಣರ ಹಾಸ್ಟೆಲ್' ಬಿಲ್ಡಿಂಗು ಆಕರ್ಷಕವಾಗಿ ಕಂಡು ಒಳಗೆ ಬಂದಿದ್ದೇ ತಪ್ಪಾಗಿದ್ದು. ಸುತ್ತ ಕೋಣೆಗಳು, ಮಧ್ಯೆ ಹುಲ್ಲಿನ ಹಾಸು, ಅದರ ಮಧ್ಯೆ ವಿದ್ಯಾಗಣಪತಿಯ ಸಣ್ಣ ಗುಡಿ, ಸುತ್ತ

